ಆಮೂರರು ಈ ಆಯ್ಕೆಯನ್ನು ಸ್ವಾಗತಿಸಿದರು. 'ಭಾರತೀಯ' ಹಾಗೂ 'ಭಾರತೀಯತೆ' ಇವುಗಳ ಸ್ವರೂಪ ಸುಲಭವಾಗಿ ವ್ಯಾಖ್ಯಾನಕ್ಕೆ ಸಿಕ್ಕುವಂಥದಲ್ಲ ಹಾಗೂ ಇವೆಲ್ಲ ಸಮಸ್ಯಾತ್ಮಕ ಪರಿಕಲ್ಪನೆಗಳು ಎಂಬ ಗಾಢ ಅರಿವಿನಲ್ಲೂ ಅವರು 'ಭಾರತೀಯ ಸಾಹಿತ್ಯ'ದ ಪರಿಕಲ್ಪನೆಯನ್ನು ತಾತ್ವಿಕವಾಗಿ ಒಪ್ಪಿದರು. ಭಾರತೀಯ ಸಾಹಿತ್ಯವೆಂಬುದು ಅನುವಾದವನ್ನೂ ತೌಲನಿಕ ಅಧ್ಯಯನವನ್ನೂ ಅವಲಂಬಿಸಿರುವ ರಚನೆಯಾಗಿರುವುದರಿಂದ ಇವೆರಡೂ ಆಮೂರರ ಆಸ್ಥೆಯ ಕ್ಷೇತ್ರಗಳಾದವು. 'ಭಾಷಾಂತರ ಅಧ್ಯಯನ'ವೆಂಬ ಜ್ಞಾನ ಶಾಖೆ ಬೆಳೆಯಲಾರಂಭಿಸಿದ ಆರಂಭದ ದಿನಗಳಲ್ಲೇ ತಾವು ಸಂಪಾದಿಸಿದ ತೌಲನಿಕ ಸಾಹಿತ್ಯ ಪರಾಮರ್ಶನ ಗ್ರಂಥದಲ್ಲಿ ಅನುವಾದಗಳ ಚರ್ಚೆಗಾಗಿಯೇ ಒಂದು ವಿಭಾಗವನ್ನು ಮೀಸಲಾಗಿಟ್ಟರು. ಭಾಷಾಂತರ ಅಧ್ಯಯನವು ಪ್ರತ್ಯೇಕ ಶಿಸ್ತಾಗಿ ಬೆಳೆಯುತ್ತಿದ್ದಂತೆ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳು ಭಾರತೀಯ ಭಾಷಾ ಸಾಹಿತ್ಯ ಕೃತಿಗಳ ಇಂಗ್ಲೀಷ್ ಅನುವಾದಗಳನ್ನು ಪ್ರಕಟಿಸಲಾರಂಭಿಸಿದಾಗ ಆಮೂರರು ಇಂತಹ ನೂರಾರು ಅನುವಾದಿತ ಕೃತಿಗಳನ್ನು 'ಡೆಕ್ಕನ್ ಹೆರಾಲ್ಡ್'ಗಾಗಿ ರಿವ್ಯ ಮಾಡಿದರು. ಕೆಲವು ವರ್ಷಗಳ ಹಿಂದೆ ಅವರ ಹಳೆಯ ಕಡತಗಳನ್ನು ಜಾಲಾಡಿ ಈ ರಿವ್ಯುಗಳೂ ಸೇರಿದಂತೆ ಈ ಕ್ಷೇತ್ರದ ಕುರಿತ ಅವರ ಲೇಖನಗಳನ್ನೆಲ್ಲ ಒಂದು ಸಂಪುಟವಾಗಿ ಜೋಡಿಸಿಕೊಟ್ಟೆದ್ದೆ. ಅದು **Our Own Voices** (ನಮ್ಮದೇ ದನಿಗಳು) ಹೆಸರಿನಲ್ಲಿ ಪ್ರಕಟವಾಯಿತು. 'ನಮ್ಮದೇ ದನಿಗಳು' ಎಂದು ಅದನ್ನು ಕರೆದಿರುವುದು ಬಹುಶಃ ಸದ್ಯಕ್ಕೆ ಭಾರತೀಯ ಸಾಹಿತ್ಯವೆಂಬುದು ಕಿವಿಯ ಪಟುತ್ವವನ್ನೇ ಆಧರಿಸಿರುವ ರಚನೆ ಎಂಬುದಕ್ಕಾಗಿರಬೇಕು. ಏಕೆಂದರೆ, ಈ ಪುಸ್ತಕದಲ್ಲೇ ಭಾರತೀಯ ಸಾಹಿತ್ಯದ ಏಕತೆಯನ್ನು ಅತ್ಯುತ್ಸಾಹದಿಂದ ಪ್ರತಿಪಾದಿಸಿರುವ ಗೋಕಾಕರ ವಾದವು ವಾಕ್ಚಾತುರ್ಯವಾಗಿ ಪ್ರಭಾವಶಾಲಿಯಾಗಿರುವಷ್ಟು ಪುರಾವೆಯಾಗಿ ಆಗಿಲ್ಲ ಎಂದು ಆಮೂರರು ಟೀಕಿಸಿದ್ದಾರೆ. ಭಾರತೀಯ ಸಾಹಿತ್ಯದ ವೈವಿಧ್ಯವು ಕೇವಲ ಭಾಷೆಗೆ ಮಾತ್ರ ಸಂಬಂಧಿಸಿದ ಸಂಗತಿಯಾಗಿರದೇ ಆಳದ ಸಾಂಸ್ಕೃತಿಕ ಪರಂಪರೆಗಳ ಭಿನ್ನತೆಯೂ ಆಗಿದೆ ಎಂಬುದು ಈ ಟೀಕೆಯ ಹಿಂದಿನ ಗೃಹೀತವಾಗಿದೆ.

ಸಮಸ್ಯೆಯೆಂದರೆ 'ಭಾರತೀಯ ಸಾಹಿತ್ಯ'ದ ಕುರಿತು ಚರ್ಚೆಯನ್ನು ಬೆಳೆಸುವುದಕ್ಕೆ ಬೇಕಾದಷ್ಟು ಆಕರಗಳೇ ನಮಗೆ ಲಭ್ಯವಿಲ್ಲ. ಎರಡು ಮೂರು ಭಾಷೆಗಳ ಮೇಲೆ ಪ್ರಭುತ್ವವನ್ನು ಸಂಪಾದಿಸಿ ಆಯಾ ಭಾಷೆಯ ಸಾಹಿತ್ಯದ ಕುರಿತು ತಿಳಿವಳಿಕೆಯನ್ನು ಪಡೆದುಕೊಂಡರೂ ಇದರಿಂದ ಭಾರತೀಯ ಸಾಹಿತ್ಯದ ಅತಿ ಚಿಕ್ಕ ಭಾಗವನ್ನೂ ಸ್ಪರ್ಶಿಸಿದಂತಾಗುವುದಿಲ್ಲ. ಈ ಸಾಹಿತ್ಯದ ಸ್ಥೂಲ ತಿಳಿವಳಿಕೆಗೇ ಆದರೂ ಅನುವಾದವನ್ನು ಅವಲಂಬಿಸಬೇಕಾಗಿರುವುದು ಅನಿವಾರ್ಯ. ಇನ್ನು ಆ ಕಾಲದಲ್ಲಿ ಭಾರತೀಯ ಭಾಷಾ ಸಾಹಿತ್ಯಗಳ ಅನುವಾದ ಎಷ್ಟು ವಿರಳವಾಗಿತ್ತೆಂದರೆ ಆಮೂರರು ಅನುವಾದಕರನ್ನೂ, ಪ್ರಕಾಶಕರನ್ನೂ ಉದಾರವಾಗಿ ಪ್ರಶಂಶಿಸಿದರು ಹಾಗೂ ಅನುವಾದದ ರಾಜಕೀಯ, ಅದರ ಸಮರ್ಪಕತೆ ಇಂತಹ ಪ್ರಶ್ನೆಗಳನ್ನು ಸದ್ಯಕ್ಕೆ ಬದಿಗಿಟ್ಟು ಇಂಗ್ಲಿಷ್ ಅನುವಾದದಲ್ಲಿ ಲಭ್ಯವಾದ ಕೃತಿಗಳನ್ನು ಇವು ನಮ್ಮದೇ ದನಿಗಳೆಂದು ಗ್ರಹಿಸಿ ಚರ್ಚಿಸಿದರು. ಅವರು ಈ ಅನುವಾದಗಳನ್ನು ನೋಡಿರುವುದು ಭಾರತದ ಇತರ ಭಾಷಾ ಸಾಹಿತ್ಯಗಳ ಕುರಿತು ತಿಳಿಯುವ ಹಸಿವಿರುವ ಒಬ್ಬ ಕನ್ನಡದ ಓದುಗನಾಗಿ ಹಾಗೂ 'ಭಾರತೀಯ ಸಾಹಿತ್ಯ' ಪ್ರಭೇದ ನಿಚ್ಚಳವಾಗಬೇಕೆಂದು ಬಯಸುವ ಸಾಹಿತ್ಯ ಚಿಂತಕನಾಗಿ.

ಆದರೆ, ಕನ್ನಡದಲ್ಲಿ ನಡೆದಿರುವ ಅನುವಾದ ಚಟುವಟಿಕೆಗಳ ಬಗೆಗೆ – ಪಾಶ್ಚಾತ್ಯ ಸಾಹಿತ್ಯದ ಕನ್ನಡಾನುವಾದ ಹಾಗೂ ಕನ್ನಡ ಸಾಹಿತ್ಯದ ಇಂಗ್ಲಿಷ್ ಅನುವಾದಗಳ ಬಗೆಗೆ – ಬರೆಯುವಾಗ ಆಮೂರರ ಧಾಟಿ, ಧೋರಣೆಗಳು ಸಂಪೂರ್ಣವಾಗಿ ಬದಲಾಗುತ್ತವೆ. ಉದಾಹರಣೆಗೆ ಕನ್ನಡದಲ್ಲಿ ಬಂದ ಶೇಕ್ಸ್ಪಿಯರ್ ನಾಟಕಗಳ ರೂಪಾಂತರಗಳು ಹಾಗೂ ಅನುವಾದಗಳು, ಬಿ.ಎಂ.ಶ್ರೀ, ಬೇಂದ್ರೆ,